ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ "ಬಲಿಜ" ಮತ್ತು ಅದರ ಉಪಜಾತಿಗಳನ್ನು ಸಂವಿಧಾನದ ಅನುಚ್ಛೇದ 15(4) ಅಡಿಯಲ್ಲಿ ಶಿಕ್ಷಣದ ಸಲುವಾಗಿ ಪ್ರವರ್ಗ-3 (ಎ) ಯಿಂದ ಪ್ರವರ್ಗ-2(ಎ)ಗೆ ಸೇರಿಸಲಾಗಿದೆ.

ಓದಲಾಗಿದೆ:-

1) ಸರ್ಕಾರದ ಆದೇಶ ಸಂಖ್ಯೆ ಸಕಇ 225 ಜಿಸಿಎಂ 2000 ದಿ. 30.03.2002

ಪ್ರಸ್ತಾವನೆ:-

ವಿವಿಧ ಸಂಘಗಳು "ಬಲಿಜ" ಮತ್ತು ಅದರ ಉಪಜಾತಿಗಳನ್ನು ಹಿಂದುಳಿದ ಪಟ್ಟಿಯಲ್ಲಿ ಪ್ರವರ್ಗ - 3(ಎ) ಯಿಂದ ಪ್ರವರ್ಗ-2(ಎ) ಗೆ ಸೇರಿಸಲೆಂದು ಮನವಿಗಳನ್ನು ಸಲ್ಲಿಸಿದ್ದರು. ಈ ಮನವಿಗಳನ್ನು ಮತ್ತು ಸರ್ಕಾರದ ಮುಂದೆ ಲಭ್ಯವಿರುವ ಇತರೆ ದಾಖಲೆಗಳನ್ನು ಇತ್ಯಾದಿ ವಿಷಯಗಳನ್ನು ಪರಿಶೀಲಿಸಲಾಗಿದೆ. ಈ ಸಮುದಾಯಕ್ಕೆ ಸಂಬಂಧಪಟ್ಟಂತೆ 1977 ರಿಂದ 2002 ರವರೆಗೆ ಆಗಿರುವ ಪ್ರವರ್ಗ ಬದಲಾವಣೆಗಳನ್ನು ಕೂಡಾ ಪರಿಶೀಲಿಸಲಾಗಿದೆ. ಈ ಹಿನ್ನಲೆಯಲ್ಲಿ ಬಲಿಜ ಸಂಘಗಳ ಬೇಡಿಕೆ ಸಮಂಜಸವಾಗಿರುತ್ತದೆ ಎಂದು ಭಾವಿಸಿ ಬಲಿಜ ಮತ್ತು ಅದರ ಉಪಜಾತಿಗಳನ್ನು ಸಂವಿಧಾನದ ಅನುಚ್ಛೇದ 15(4) ಶಿಕ್ಷಣ ಸಲುವಾಗಿ ಮಾತ್ರ ಮೀಸಲಾತಿ ಪಡೆಯಲು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ-3(ಎ) ಯಿಂದ ಪ್ರವರ್ಗ-2(ಎ) ಗೆ ಸೇರಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ ನೀಡಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಸಕಇ 179 ಜಿಸಿಎ 2010,
ಬೆಂಗಳೂರು, ದಿನಾಂಕ:15.07.2011

ಮೇಲೆ ವಿವರಿಸಿದ ಹಿನ್ನಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ ಸಕಇ 225 ಜಿಸಿಎಂ 2000 ದಿನಾಂಕ 30.03.2002 ಕ್ರಮ ಸಂಖ್ಯೆ 3 (ಎ ಯಿಂದ ಎಡ್ ವರೆಗೆ) ಪ್ರವರ್ಗ 3ಎ ದಲ್ಲಿರುವ ಪದಗಳಿ "ಬಲಿಜ" ಮತ್ತು ಉಪಜಾತಿಗಳಾದ ಬಲಜಿಗ/ಬಣಜಿಗ/ ಗೌಡಬಣಜಿಗ ಹಾಯ್ಕು, ತೆಲಗ ಬಲಿಜ / ತೆಲಗ ಬಣಜಿಗ / ಶೆಟ್ಟಿಬಲಿಜ, ಶೆಟ್ಟಿ ಬಣಜಿಗ/ ಬಣಜಿಗ ಶೆಟ್ಟಿ, ದಾಸರ ಬಲಿಜ / ದಾಸರ ಬಲಜಿಗ/ ದಾಸರ ಬಣಜಿಗ/ ದಾಸಬಣಜಿಗ, ಕನ್ಯಾಪ್, ಮುನ್ನೂರ/ ಮುನ್ನಾರ್/ ಮುನ್ನೂರ್ಕಾಪು, ಬಳಿಗಾರ/ ಬಳೆಬಣಜಿಗ/ ಬಳೆಬಲಜಿಗ/ ಬಳೆ ಶೆಟ್ಟಿ/ ಬಣಗಾರ, ರೆಡ್ಡಿ (ಬಲಿಜ), ಜನವಾನ್, ಉದ್ಧಾರ(ಬಲಿಜ), ಹಾಲೇರು (ಬಲಿಜ), ಪ್ರಕಾರಾದಲ್ಲಿ ಸಂವಿಧಾನದ ಅನುಚ್ಛೇದ 15(4) ಶಿಕ್ಷಣ ಸಲುವಾಗಿ ಮಾತ್ರ ಮೀಸಲಾತಿ ಪಡೆಯಲು ಮೇಲ್ಕಂಡ ಆದೇಶ ದಿನಾಂಕ 30.03.2002 ದ ಪಟ್ಟಿಯಲ್ಲಿ ಪ್ರವರ್ಗ-3(ಎ) ಯಿಂದ ಪ್ರವರ್ಗ-2(ಎ) ಗೆ ಸೇರಿಸಲಾಗಿದೆ. ಆದರೆ, ಅನುಚ್ಛೇದ 15(4) ಉದ್ಯೋಗದ ಸಲುವಾಗಿ ಸೇರಿಸಿದಂತೆ ಪ್ರವರ್ಗ-3(ಎ) ದಲ್ಲಿ ಮೀಸಲಾತಿ ಪಡೆಯಲು ಬಲಿಜ ಮತ್ತು ಅದರ ಉಪಜಾತಿಗಳನ್ನು ಮುಂದುವರೆಸಲಾಗಿದೆ. ಈ ಆದೇಶ, ಸರ್ಕಾರದ ಆದೇಶ ಸಂಖ್ಯೆ ಸಕಇ 225 ಜಿಸಿಎಂ 2000 ದಿ.30.03.2002 ದಲ್ಲಿರುವ ಷರತ್ತುಗಳಿಗೊಳಪಟ್ಟಿರುತ್ತದೆ.

ಈ ಆದೇಶವನ್ನು ಸಚಿವ ಸಂಪುಟ ಅನುಮೋದನೆಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಂ.ಶಾಖೆ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಮಾಜ ಕಲ್ಯಾಣ ಇಲಾಖೆ.

ಗೆ,

1) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
2) ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು.
3) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
4) ಎಲ್ಲಾ ಉಪವಿಭಾಗಾಧಿಕಾರಿಗಳು
5) ಎಲ್ಲಾ ಜಿಲ್ಲೆಯ ತಹಶೀಲ್ದಾರ್‌ಗಳು - ಇನ್ನು ಮುಂದೆ ಜಾತಿ ಪ್ರಮಾಣ ಪತ್ರಗಳನ್ನು ನೀಡುವಾಗ ಮೇಲ್ಕಂಡ ಆದೇಶವನ್ನು ಗಮನಿಸಿ ಜಾತಿ ಪ್ರಮಾಣ ಪತ್ರದಲ್ಲಿ ಶಿಕ್ಷಣದ ಸಲುವಾಗಿ ಎಂದು ಸಮೂದಿಸತಕ್ಕದ್ದು.
6) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌದ,
7) ಸರ್ಕಾರದ ಪದಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ